

## ಮದುವೆ ಆಗ್ಬಿಟ್ರೆ ಚೆನ್ನಾಗಿರಲ್ಲ!

ಇತ್ತೀಚೆಗೆ ಸಮಾರಂಭವೊಂದಕ್ಕೆ ಹೋಗಿದ್ದೆ. ಬಹಳ ದಿನಗಳ ನಂತರ ಬಂಧುಗಳನ್ನು ಕಾಣುವ ಅವಕಾಶ ಸಿಕ್ಕಿತ್ತು. ಚಿಕ್ಕವನಾಗಿದ್ದಾಗ ನೋಡಿದ್ದ ಸಂಬಂಧಿಕರ ಹುಡುಗನೊಬ್ಬ ಮಾತಿಗೆ ಸಿಕ್ಕ. ಅದೂ ಇದೂ ಮಾತನಾಡುತ್ತಾ, 'ಎಷ್ಟೋ ನಿನ್ ವಯಸ್ಸು' ಎಂದು ಕೇಳಿದೆ. 'ಇಪ್ಪತ್ತೇಳು ಅಂಕಲ್' ಎಂದು ಉತ್ತರಿಸಿದ. 'ಬೇಗ ಮದುವೆ ಮಾಡ್ಕೊ. ಲೇಟಾದ್ರೆ ಹುಡ್ಗೀರು ಸಿಗಲ್ಲ' ಎಂದು ಪುಕ್ಕಟೆ ಸಲಹೆ ಕೊಟ್ಟೆ. ಅವನೂ ಒಳ್ಳೇ ಮೂಡಿನಲ್ಲಿದ್ದ. 'ಹೂಂ ಅಂಕಲ್, ಆದಷ್ಟು ಬೇಗ ಮದುವೆ ಮಾಡ್ಕೊಂಡ್ಬಿಡೋಣಾಂತಿದೀನಿ' ಎಂದ.

ನಮ್ಮ ಸಂಭಾಷಣೆಯನ್ನು ಕೇಳುತ್ತಾ ಪಕ್ಕದಲ್ಲಿ ಕುಳಿತಿದ್ದ ಹಿರಿಯರೊಬ್ಬರು, 'ಏನೋ, ಮದ್ವೆ ಮಾಡ್ಕೊಂಡ್ಬಿಡ್ತೀಯಾ, ಚೆನ್ನಾಗಿರಲ್ಲ ನೋಡು' ಎಂದು ಗದರಿದರು. ಹುಡುಗ ತಬ್ಬಿಬ್ಬು. ನನಗೂ 'ಇವರೇನು ಹೇಳ್ತಿದಾರೆ' ಎಂದು ಗೊಂದಲವಾಯಿತು. ಕೂಡಲೇ ಆ ಹಿರಿಯರು ನಗುತ್ತಾ, 'ಅಯ್ಯೋ ಪೆದ್ದುಮುಂಡೇದೇ, ಅರ್ಥವಾಗಲಿಲ್ವೇ? ಮದ್ವೆ ಮಾಡ್ಕೋ, ಯಾರು ಬೇಡಾಂದ್ರು. ಆದ್ರೆ (ಹುಡ್ಗೀನ) ಬಿಡೋಕೆ ಹೋಗ್ಬೇಡಾ!' ಅಂದರು. ಅಲ್ಲಿದ್ದವರೆಲ್ಲ ಆ ಹಿರಿಯರ ಮಾತಿನ ಚಾತುರ್ಯಕ್ಕೆ ಬೆರಗಾಗಿ ನಕ್ಕರು.
ಆ ಹುಡುಗ ನಾಚಿಕೆಯಿಂದ ಮುದುಡಿಹೋಗಿದ್ದ!

**ಕೆ.ಪಿ. ಸತ್ಯನಾರಾಯಣ**

## 'ನೀವೇ ಹೆಬ್ಬೆಟ್ಟು'

ಹಳ್ಳಿಯಿಂದ ಬ್ಯಾಂಕಿಗೆ ಆಗೀಗ ಬರುವ ಪೊನ್ನಮ್ಮ ಶಾಲೆಯ ಬಿಸಿಯೂಟದ ವಾರಸುದಾರಿಣಿ. ಆಕೆಗೆ ಸಹಿ ಮಾಡಲು ಬರುವುದಿಲ್ಲ. ಅವರು ಪ್ರತೀಬಾರಿ ಬ್ಯಾಂಕಿಗೆ ಬಂದಾಗ, 'ಮುಂದಿನ ಸಾರಿ ಬರುವಾಗ, ಸಹಿ ಮಾಡಲು ಕಲಿಯದಿದ್ದರೆ, ಹಣ ಕೊಡುವುದಿಲ್ಲ' ಎಂದು ತಮಾಷೆ ಮಾಡುತ್ತಿದ್ದೆ. 'ನೀವು ಹೇಳಿದ್ದನ್ನು ಕೇಳಿ ಕೇಳಿ ನಾನು ಮುದುಕಿಯಾದೆ' ಅನ್ನುತ್ತಿದ್ದರು. 'ಏನು ಮಾಡುವುದು, ಬರಹ ಬರುವುದಿಲ್ಲ' ಅನ್ನುತ್ತಿದ್ದರು. ಒಮ್ಮೆ ಬೆಳಗ್ಗೆ ಕಚೇರಿಯಲ್ಲಿ ಕಂಪ್ಯೂಟರ್ ಆನ್ ಮಾಡಿ, ಬಯೋಮೆಟ್ರಿಕ್‌ಗಾಗಿ ಸತತ ಪ್ರಯತ್ನಿಸಿ, ವಿಫಲಳಾದೆ. ಕೌಂಟರಿನಲ್ಲಿ ನಿಂತ ಪೊನ್ನಮ್ಮ, 'ನನಗೆ ಹೇಳಿ, ನೀವೇ ಹೆಬ್ಬೆಟ್ಟು ಶುರು ಹಚ್ಚಿಕೊಂಡಿದ್ದೀರಲ್ಲ!?' ಎನ್ನಬೇಕೇ! 'ನಮಗೆ ಮಾತ್ರ ಕೈಗೆಲ್ಲಾ ಮಸಿ ತಾಗಲಿ ಎಂದು ದೊಡ್ಡ ಇಂಕ್ ಪ್ಯಾಡ್ ಕೊಟ್ಟು ನಿಮಗೆ ಮಾತ್ರ ಚಿಕ್ಕದು (ಬಯೋಮೆಟ್ರಿಕ್ ಸಾಧನ ತೋರಿಸಿ) ಇಟ್ಟುಕೊಂಡಿದ್ದೀರಿ' ಎಂದು ಹೇಳಿದ್ದು ನನ್ನನ್ನು ವಿಸ್ಮಿತಳಾಗಿಸಿತ್ತು!

**ಪೂರ್ಣಿಮಾ ಗುರುದೇವ ಭಂಡಾರ್ಕರ್**

ಚಿತ್ರಗಳು: ಗಣೇಶ ಆಚಾರ್ಯ

